# ಭಾರತಿದೇವಿಯ ನೆನೆ ನೆನೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 420.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 137.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. Note: Lyrics given here are as per Ref. 1. The wordings in both the books are same.
5. Note: Singer has followed these lyrics.

ರಾಗ: ಮಧ್ಯಮಾವತಿ ತಾಳ: ತ್ರಿಪುಟ

ಭಾರತಿದೇವಿಯ ನೆನೆ ನೆನೆ
ನಿರುತ ಭಕುತಿಗಿದು ಮನೆ ಮನೆ || ಪ ||

ಮಾರುತನರ್ಧಾಂಗಿ ಸುಚರಿತ ಕೋಮಲಾಂಗಿ
ಸಾರಸಾಕ್ಷಿ ಕೃಪಾಂಗಿ ಅಪಾಂಗಿ || 1 ||

ಕಿಂಕಿಣಿ ಕಿಣಿಪಾದ ಪಂಕಜ ನೂಪುರ
ಕಂಕಣ ಕುಂಡಲಾಲಂಕೃತ ದೇಹ || 2 ||

ಶಂಕರ ಸುರವರ ವಂದಿತ ಚರಣೆ
ಕಿಂಕರಿ ಪುರಂದರವಿಟ್ಠಲ ಕರುಣೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ನಿರುತ ಭಕುತಿಗೆ** – ಹರಿಯಲ್ಲಿ ಮನಃಪ್ರಾವಣ್ಯವನ್ನೊದಗಿಸಿ ಭಕ್ತಿಯನ್ನು ಪ್ರೇರಿಸುವವಳು.

**ಮಾರುತನ ಅರ್ಧಾಂಗಿ** – ವರುದ್ಗಣಗಳ ಮಗನಾದ ಹನುಂತನ ಹೆಂಡತಿ (ತನ್ನ ಹಿಂದಿನ ಎರಡು ಜನ್ಮಗಳಲ್ಲಿ).

**ಸಾರಸಾಕ್ಷಿ** – ಸರಸ್ಸಿನಲ್ಲಿ (ಕೊಳದಲ್ಲಿ) ಹುಟ್ಟಿದ್ದು ಸಾರಸ, ತಾವರೆ; ಅದರಂತೆ ಚೆಲುವಾದ ಕಣ್ಣುಳ್ಳವಳು.

**ಕೃಪಾಂಗಿ ಅಪಾಂಗಿ** – ತನ್ನ ಕಡೆಗಣ್ಣಿಂದ (ಅಪಾಂಗ) ಕರುಣೆಯನ್ನು ಸೂಸುವವಳು.

**ಕಿಂಕಿಣಿ** – ಕಿರುಗೆಜ್ಜೆ.

**ಪಂಕಜನೂಪುರ** – ತಾವರೆ ಹೂವಿನ ಆಕಾರದಲ್ಲಿರುವ ಕಾಲುಂಗುರ.

**ಕಂಕಣ ಕುಂಡಲ** – ಕೈಬಳೆ, ಓಲೆ.

**ಶಂಕರ ಸುರವರ ವಂದಿತ ಚರಣೆ** – ತನ್ನ ಕಕ್ಷೆಗಿಮತ ಕೆಳಕಕ್ಷೆಯಲ್ಲಿರುವ ರುದ್ರ, ಮತ್ತಿತರ ತತ್ತ್ವೇಶರಿಂದ ಸೇವಿಸಲ್ಪಡುವವಳು.

**ಕಿಂಕರಿ** – ಹರಿಯ ಸೇವಕಳು.

**Classification:** Keerthane
**Ankita:** purandara vittala
**Location:** NA
**Category:** hanuma stuti
**Sub-Category:** Bharati, hanuma, bhakti, gejje, deha, shiva, karuna,
**Pravachana:** NA
**Explanation:** NA